ಇರುವ ಶೌಚಾಲಯಗಳಿಗೆ ಏನಾದರೂ ಹೆಚ್ಚು ಖರೀದಿ ಮಾಡಿ, ಸ್ವಚ್ಛವಾಗಿ ಇಡಲು ಏನಾದರೂ ಪ್ರಯತ್ನ ಮಾಡುತ್ತೀರಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ನಾವು ಸರ್ಕಾರದವರು ಖರ್ಚು ಮಾಡುವುದಿಲ್ಲ, ಅಲ್ಲಿಯ ಕಾರ್ಪೊರೇಷನ್‌ದವರೇ ಬಜೆಟ್‌ನಲ್ಲಿ ಹಣ ಇಟ್ಟುಕೊಂಡು ಅವರೇ ಈ ಕೆಲಸವನ್ನು ಮಾಡುತ್ತಾರೆ. ಇದಕ್ಕೆ ಬೇರೆಯಾಗಿ ಬಜೆಟ್ ಕೊಡಲು ನಮ್ಮ ಹತ್ತಿರ ಫಂಡ್ ಇಲ್ಲ. ಯಾವ ಗ್ರಾಂಟ್ಸ್‌ಗಳನ್ನು ಕಾರ್ಪೊರೇಷನ್‌ಗೆ ಕೊಡಬೇಕು ಅವುಗಳನ್ನು ನಾವು ಕೊಡುತ್ತಿದ್ದೇವೆ. ಅವರೆ ಕೌನ್ಸಿಲ್‌ದಲ್ಲಿ ವಿಚಾರ ಮಾಡಿ ಯಾವ ರೀತಿ ಮಾಡಬೇಕೆಂಬುದು ಅವರಿಗೆ ಬಿಟ್ಟ ವಿಷಯ ಅದನ್ನು ಅವರೇ ಮಾಡಬೇಕು.

ಶ್ರೀ ಅಶೋಕ ಕಾಟವೆ : ಆ ಕಾರ್ಪೊರೇಷನ್‌ರವರ ಹತ್ತಿರ ಹಣ ಇಲ್ಲ. ಆದ್ದರಿಂದ ರಾಜ್ಯ ಸರ್ಕಾರ ಏನಾದರೂ ವಿಶೇಷ ಅನುದಾನ ಕೊಟ್ಟು ಈ ಹೆಲ್ತ್ ಸ್ಯಾನಿಟೇಷನ್ ಬಗ್ಗೆ ವಿಚಾರ ಮಾಡಿ. ಎರಡನೆಯದಾಗಿ ಆ ಶೌಚಾಲಯಗಳನ್ನು ಕಟ್ಟಲು ತಾವು ಏನಾದರೂ ವಿಶೇಷ ಫಂಡನ್ನು ಕೊಟ್ಟರೆ ಅನುಕೂಲವಾಗುತ್ತದೆ ಎಂದು ನಾನು ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್: ಈ ಸಂಪೂರ್ಣ ಶೌಚಾಲಯ ಕಟ್ಟಲು ಬೇಕಾಗುವ ಹಣವನ್ನು ಒದಗಿಸಲು ಸರ್ಕಾರದ ಹತ್ತಿರ ಹಣ ಇಲ್ಲ. ನಾವು ಏನು ಗ್ರಾಂಟ್ಸ್ ಕೊಡುತ್ತೇವೆ, ಅದರಲ್ಲಿಯೇ ಕಾರ್ಪೊರೇಷನ್‌ದವರು ಮಾಡಿಕೊಳ್ಳಬೇಕು.

ಮೈಸೂರಿನಲ್ಲಿರುವ ರೋಗಗ್ರಸ್ತ ಕೈಗಾರಿಕೆಗಳು

566 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ನಗರದಲ್ಲಿರುವ ಸಣ್ಣ ಕೈಗಾರಿಕೆಗಳು ಎಷ್ಟು?*

ಆ) *ಈ ಸಣ್ಣ ಕೈಗಾರಿಕೆಗಳಲ್ಲಿ ರೋಗಗ್ರಸ್ತ ಹಾಗೂ ಉತ್ತಮವಾಗಿ ನಡೆಯುತ್ತಿರುವ ಕೈಗಾರಿಕೆಗಳು ಎಷ್ಟು?*

ಇ) *ಈ ರೋಗಗ್ರಸ್ತ ಕೈಗಾರಿಕೆಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಅಗತ್ಯ ಪರ್ಯಾಯ ಕ್ರಮವೇನು?*

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ) 5203.

ಆ) 89 ರೋಗಗ್ರಸ್ತವಾಗಿರುತ್ತವೆ. ಇತರೆ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಇ) ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರಿ ರಿಯಾಯಿತಿ ಮತ್ತು

ಪ್ರೋತ್ಸಾಹಗಳನ್ನು ನೀಡಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಹಾಗೂ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

1. ಮಾರ್ಜಿನ್ ಹಣದ ಸಹಾಯ
2. ತೆರಿಗೆ ವಿನಾಯಿತಿ
3. ಕೆಇಬಿ ಯಿಂದ ವಿದ್ಯುಚ್ಛಕ್ತಿ ರಿಯಾಯಿತಿ
4. ಕೆಐಎಡಿಬಿ, ಕೆಎಸ್ಎಸ್ಐಡಿಸಿ, ಕಿಯೋನಿಕ್ಸ್ ಸಂಸ್ಥೆಗಳಿಂದ ಸಾಲದ ಮರು ವಿಂಗಡಣೆ.
5. ಅಭಿವೃದ್ಧಿ ಸಾಲದ ಮರು ವಿಂಗಡಣೆ
6. ಕಾರ್ಮಿಕ ಇಲಾಖೆಯಿಂದ ರಿಯಾಯಿತಿ.

ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಉತ್ತರ ಕೊಡುವ ಸಂದರ್ಭದಲ್ಲಿ 29 ರೋಗಗ್ರಸ್ತ ಸಣ್ಣ ಕೈಗಾರಿಕೆಗಳು ಇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇವುಗಳನ್ನು ಪುನಃಶ್ಚೇತನ ಮಾಡಲು ತೆರಿಗೆ ವಿನಾಯಿತಿಯನ್ನು ಕೊಡುತ್ತೇವೆ. ಮಾರ್ಜಿನ್ ಹಣ ಸಹಾಯ ಮಾಡುತ್ತೇವೆ, ಕೆಇಬಿ ಯಿಂದ ವಿದ್ಯುಚ್ಛಕ್ತಿ ರಿಯಾಯಿತಿ ಕೊಡುತ್ತೇವೆ ಹೀಗೆ ಬಹಳಷ್ಟು ವಿಚಾರಗಳನ್ನು ಉತ್ತರದಲ್ಲಿ ತಿಳಿಸಿದ್ದಾರೆ. ಈ ರೋಗಗ್ರಸ್ತ ವಾಗಲು ಕಾರಣ ತಿಳಿದುಕೊಂಡರೆ, ಅದನ್ನು ತಡೆಯುವಲ್ಲಿ ಕ್ರಮಕೈಗೊಳ್ಳಲು ಸರ್ಕಾರ ಯೋಚನೆ ಮಾಡಿದ್ದರೆ, ಈ ಮುಂದೆ ಬರತಕ್ಕಂತಹ ಗಿರಾಕಿಗಳನ್ನು ಕೊಡತಕ್ಕಂತಹ ಅವಶ್ಯಕತೆ ಬರುವುದಿಲ್ಲ. ಇವತ್ತು ವಿದ್ಯುಚ್ಛಕ್ತಿ ಮಂಡಳಿಯವರು ಕಾರ್ಖಾನೆಯಲ್ಲಿ ಕಾರ್ಮಿಕರು ಕೆಲಸ ಮಾಡುವ ಸಂದರ್ಭದಲ್ಲಿ 3-4 ಗಂಟೆಗಳ ಕಾಲ ವಿದ್ಯುಚ್ಛಕ್ತಿ ಸರಬರಾಜು ಕೊಡುವುದಿಲ್ಲ. ಹೀಗಾಗಿ ಆ ಕೈಗಾರಿಕೆಗಳಿಂದ ಯಾವ ವಸ್ತುಗಳು ಉತ್ಪಾದನೆಯಾಗುತ್ತವೆ, ಅವು ಬರುವುದಕ್ಕೆ ತೊಂದರೆಯಾಗುತ್ತದೆ. ಹೀಗಾದರೆ ಅಲ್ಲಿ ಕಾರ್ಮಿಕರು ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಅಲ್ಲಿ ನೀರಿನ ವ್ಯವಸ್ಥೆಯೂ ಇರುವುದಿಲ್ಲ. ಅವರು ಮಾರ್ಜಿನ್ ಕೊಡುವುದು ಇರಲಿ ಸರ್ಕಾರದವರು ಸಬ್ಸೀಡಿಯನ್ನೂ ಸಹ ಕೊಟ್ಟಿಲ್ಲ. ಐದು ವರ್ಷಗಳಿಂದ ಸಣ್ಣ ಕೈಗಾರಿಕೆಗಳಿಗೆ ಕೊಡುವ ಸಬ್ಸೀಡಿ ಏನು ಇದೆ ಅದನ್ನು ಸರ್ಕಾರದವರು ಕೊಟ್ಟಿಲ್ಲ. ತಾವು ವಿನಾಯಿತಿ ಕೊಡುವುದು ಇರಲಿ. ಮೊದಲು ನೀವು ಸಬ್ಸಿಡಿಯನ್ನು ಕೊಡಬೇಕು. ಆ ಸಬ್ಸಿಡಿಯನ್ನು ಕೊಡಲು ತಮಗೆ ಆಗಲಿಲ್ಲ. ಮತ್ತೆ ಸರ್ಕಾರದಿಂದ ಕೊಡುವ ವಿದ್ಯುಚ್ಛಕ್ತಿಯನ್ನು ಸರಿಯಾಗಿ ಕೊಟ್ಟರೆ ಅವು ರೋಗಗ್ರಸ್ತವಾಗಲು ಅವಕಾಶವೇ ಇರುವುದಿಲ್ಲ ಎನ್ನುವಂತಹ ಮಾತನ್ನು ನಾನು ತಮ್ಮ ಮೂಲಕ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಬಿ. ಎನ್. ಮೊಯ್ದೀನ್ : ಮಾನ್ಯ ಅಧ್ಯಕ್ಷರೇ, ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗಲು ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಇನ್ನೂ ಕೆಲವು ಬೇರೆ ಕಾರಣಗಳು ಇವೆ. ಮುಖ್ಯವಾಗಿ ಸಕಾಲಕ್ಕೆ ದೊರೆಯದೆ ಇರುವಂತಹ ಬಂಡವಾಳ, ಮಾರುಕಟ್ಟೆ ಇವು ತಾವು ಹೇಳುವ ಕಾರಣಗಳ ಜೊತೆಗೆ ಇವು ಕೂಡಿವೆ. ಅದಕ್ಕಾಗಿ ನಾವು ಕಳೆದ ಡಿಸೆಂಬರ್‌ನಲ್ಲಿ ಒಂದು ಪ್ರಗತಿಪರವಾದ ಸರ್ಕಾರಿ ಆಜ್ಞೆಯನ್ನು ಈ ರೋಗಗ್ರಸ್ಥ ಉದ್ದಿಮೆಗಳನ್ನು ಪುನಃಶ್ಚೇತನಗೊಳಿಸುವ ಉದ್ದೇಶದಿಂದ ತಂದಿದ್ದೇವೆ. ಅಲ್ಲಿ ಎಲ್ಲಾ

ಕಾರ್ಯಕ್ರಮಗಳನ್ನು ಇಟ್ಟಿದ್ದೇವೆ. ಪ್ರಾಯಶಃ ಮುಂದೆ ದೇಶದಲ್ಲಿ ಇಷ್ಟು ಪ್ರಗತಿಪರವಾದ ಕಾರ್ಯಕ್ರಮ ಬೇರೆ ಎಲ್ಲಿಯೂ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಮೂರು ಹಂತಗಳಲ್ಲಿ ಕಮಿಟಿಗಳನ್ನು ಮಾಡಿದ್ದೇವೆ. ಒಂದು District level task force, district level committee and State level Committee. ಈ ಮೂರು ಕಮಿಟಿಗಳನ್ನು ಜಿಲ್ಲಾಮಟ್ಟಕ್ಕಿಂತ ಕೆಳಮಟ್ಟದಲ್ಲಿರುವ ಎಲ್ಲಾ ರೋಗಗ್ರಸ್ಥವಾದ ಯೂನಿಟ್ಸ್ ಏನು ಇವೆ ಇವುಗಳಿಗೆ ಸಹಾಯ ಮಾಡಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದರ ಜೊತೆಗೆ ನಮಗೆ ಸಹಕಾರ ಮಾಡಬೇಕಾದವರು ಯಾರು ಎಂದರೆ ಯಾರು ಯೂನಿಟ್ಸ್‌ಗಳಿಗೆ ಸಾಲವನ್ನು ಕೊಟ್ಟಿದ್ದಾರೆ ಅವರು. ಕೆಎಫ್‌ಸಿ ಯಾಗಲಿ, ಕೆಎಸ್‌ಎಫ್‌ಸಿ ಯಾಗಲಿ, ಅಥವಾ ರಾಷ್ಟ್ರೀಕೃತ ಬ್ಯಾಂಕ್ ಆಗಲಿ ಅವರು ನಮಗೆ ಸಹಕಾರ ಕೊಟ್ಟರೆ ಖಂಡಿತವಾಗಿ ಈ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುತ್ತೇವೆ. ಇದನ್ನು ಕಾರ್ಯರೂಪಕ್ಕೆ ತರಲಿಕ್ಕಾಗಿಯೇ ಕಮಿಟಿಗಳನ್ನು ನಾವು ಬೇರೆ-ಬೇರೆ ಹಂತದಲ್ಲಿ ಮಾಡಿದ್ದೇವೆಂದು ತಮ್ಮ ಮೂಲಕ ಮಾನ್ಯಸದಸ್ಯರಿಗೆ ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಇ. ಮಾರುತಿರಾವ್ ಪವಾರ್ : ಅವನಿಗೆ ಬಡ್ಡಿ ಕಟ್ಟುವುದಕ್ಕೆ ಬಂಡವಾಳದ ತೊಂದರೆಯಾಗುತ್ತದೆ. ಈ ನೀವು ಏನು ಕಮಿಟಿಗಳನ್ನು ಅಭಿವೃದ್ಧಿಪಡಿಸಲು ಮಾಡಿದ್ದೀರಿ ಅವು ಸರಿಯಾಗಿ ಕಾರ್ಯರೂಪಕ್ಕೆ ಬರುತ್ತಾ ಇಲ್ಲ. ನೀವು 89 ಸಣ್ಣ ಕೈಗಾರಿಕೆಗಳು ಮಾತ್ರ ರೋಗಗ್ರಸ್ತ ಕೈಗಾರಿಕೆಗಳು ಎಂದು ಹೇಳಿದ್ದೀರಿ, ನೀವು ನನ್ನ ಜೊತೆಗೆ ಮೈಸೂರಿಗೆ ಬಂದು ನೋಡಿ, ಇವತ್ತು ಶೇ 50ರಷ್ಟು ಲೋನ್ ತೆಗೆದುಕೊಂಡು ಮುಚ್ಚಿರುವಂಥ ಕಾರ್ಖಾನೆಗಳ ಬಗ್ಗೆ ಮಾತ್ರ ತಾವು ಹೇಳಿದ್ದೀರಿ. ಅಲ್ಲಿ ಬಂದು ನೋಡಿ ಶೇ 50ರಷ್ಟು ಕೈಗಾರಿಕೆಗಳು ಎಲ್ಲಾ ರೋಗಗ್ರಸ್ತವಾಗಿದೆ. ಇವುಗಳನ್ನು ಪುನಃಶೇತನಗೊಳಿಸಿದ್ದರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ಎ. ಮೊಯ್ದೀನ್: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದೇನೆ. ಈ ಸಂಸ್ಥೆಗಳಿಗೆ ನಾವು ರಾಷ್ಟ್ರಮಟ್ಟದಲ್ಲಿ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಮಾನ್ಯ ಸದಸ್ಯರು ಮಾತನಾಡುತ್ತಾ ಇಂಟರೆಸ್ಟ್ ಬಗ್ಗೆ ಹೇಳಿದ್ದಾರೆ. ಇದು ನಮ್ಮ ಕೈಯಲ್ಲಿ ಮಾಡುವುದಕ್ಕಾಗುವ ಹಾಗೆ ಇಲ್ಲ. ಆದರೆ ಮಾನ್ಯ ಸದಸ್ಯರ ಕಳಕಳಿಗೆ ನಾನೂ ಕೂಡ ನನ್ನ ಸಹಮತವನ್ನು ವ್ಯಕ್ತ ಪಡಿಸುತ್ತೇನೆ. ಸಣ್ಣ ಕೈಗಾರಿಕೆಗಳಿಗೆ ಕೊಡತಕ್ಕಂಥ ಸಾಲದ ಮೇಲೆ ಇರತಕ್ಕಂಥ ಬಡ್ಡಿ ದರ ಕಡಿಮೆ ಆಗಬೇಕೆಂದು ಹೇಳಿ ರಾಷ್ಟ್ರಮಟ್ಟದಲ್ಲಿರತಕ್ಕಂಥ ಅವಕಾಶಗಳನ್ನು ಬಳಸಿಕೊಂಡು ನಾನು ಹೇಳಿದ್ದೇನೆ. ನಿಮ್ಮ ಅಭಿಪ್ರಾಯಕ್ಕೆ ನನ್ನ ಪೂರ್ಣ ಸಹಮತವಿದೆಯೆನ್ನುವ ಮಾತನ್ನು ಹೇಳಬಯಸುತ್ತೇನೆ.

ಜಗಳೂರು ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ

567 - ಶ್ರೀ ಎಂ. ಬಸಪ್ಪ (ಜಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಗಳೂರು ಪುರಸಭೆ (ಪುರ ಪಂಚಾಯ್ತಿ ಸಭೆ) ವ್ಯಾಪ್ತಿಯಲ್ಲಿ ಕಳೆದ ವರ್ಷ ಅತೀವವಾದ ನೀರಿನ ಅಭಾವವಿದ್ದು ಇರತಕ್ಕ ಬೋರ್‌ವೆಲ್‌ಗಳಲ್ಲಿ ಲೋಹಗಳಿಂದ ಕೂಡಿದ ಕಲುಷಿತ ನೀರಿನ ಅಂಶವಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?